**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 71/2023**

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿತರುಃ** ದಂಬಲಿಂಗೇಗೌಡ,
ಬಿನ್ ಲೇಟ್ ನಂಜುಂಡೇಗೌಡ,
69 ವರ್ಷ ವಯಸ್ಸು,
ವಾಸಃ ರಾಘವೇಂದ್ರ ಸಾ ಮಿಲ್ ರಸ್ತೆ,
ಗಾಯಿತ್ರಿ ಬಡಾವಣೆ,
ಚನ್ನರಾಯಪಟ್ಟಣಟೌನ್, ಹಾಸನ.

**ದೋಷಾರೋಪಣೆ**

**ದೀಪು ಬಿ.ಸಿ.**, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ ಆದ ನಾನು ಆರೋಪಿ/ಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 17.11.2022 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಚನ್ನರಾಯಪಟ್ಟಣ ಟೌನ್, ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯ (ಮಿನಿ ವಿಧಾನಸೌಧ) ದ ಮುಂದೆ ಮುಂಬಾಗಿಲ ಹತ್ತಿರ ಸಾಕ್ಷಿ.1 ರವರು ಇರುವಾಗ, ಆರೋಪಿಯಾದ ನೀವು ಸಾಕ್ಷಿ.1 ರವರನ್ನು ಕುರಿತು ಅವರು ಕುಪಿತರಾಗಿ ಶಾಂತಿಭಂಗವನ್ನುಂಟುಮಾಡಲಿ ಎಂಬ ಉದ್ದೇಶದಿಂದ, ಸಾಕ್ಷಿ.1 ರವರಿಗೆ ಏಕಾಏಕಿ ಏಕವಚನದಲ್ಲಿ ಯಾಕೋ ನಮ್ಮ

ನುಗ್ಗೇಹಳ್ಳಿ ಹೋಬಳಿ ಕಲ್ಕೆರೆ ಗ್ರಾಮದ ಸರ್ವೆ ನಂ.79 ರ 3.16 ಗುಂಟೆ ಜಮೀನಿನ ದುರಸ್ತು ಮಾಡಿಕೊಟ್ಟಿರುವುದಿಲ್ಲ, ನೀನು ಯಾವ ಸೀಮೆ ಅಧಿಕಾರಿಯೋ ಬೇವರ್ಸಿ ನನ್ನ ಮಗನೆ  ಎಂದು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಆರೋಪಿಯಾದ ನೀವು **ಭಾರತೀಯ ದಂಡ ಸಂಹಿತೆ ಕಲಂ: 504** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**2)** ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಯಾದ ನೀವು ಸಾಕ್ಷಿ.1 ರವರಿಗೆ ಏರು ಧ್ವನಿಯಲ್ಲಿ ಗಲಾಟೆ ಮಾಡಿ ಕಚೇರಿಯಲ್ಲಿ ಅಶಾಂತಿ ವಾತಾವರಣ ಉಂಟುಮಾಡಿ ಲೋಕ ನೌಕರನಾದ ಸಾಕ್ಷಿ.1 ರವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿ, ಆ ಮೂಲಕ ಆರೋಪಿಯಾದ ನೀವು **ಭಾರತೀಯ ದಂಡ ಸಂಹಿತೆ ಕಲಂ: 353** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ದಿನಾಂಕ: **11.08.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ</u>**

**<u>ಸಿಸಿ ಸಂಖ್ಯೆ: 71/2023</u>**

**<u>ಪಿರ್ಯಾದಿದಾರರು:</u>** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**<u>ಆರೋಪಿತರು:</u>** ದಂಬಲಿಂಗೇಗೌಡ ಬಿನ್ ಲೇಟ್ ನಂಜುಂಡೇಗೌಡ,
69 ವರ್ಷ ವಯಸ್ಸು,
ವಾಸಃ ರಾಘವೇಂದ್ರ ಸಾ ಮಿಲ್ ರಸ್ತೆ,
ಗಾಯಿತ್ರಿ ಬಡಾವಣೆ,
ಚನ್ನರಾಯಪಟ್ಟಣಟೌನ್, ಹಾಸನ.

**<u>ದೋಷಾರೋಪಣೆ</u>**

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆ ನಿಮಗೆ ತಿಳಿಯಿತೆ?

ಉತ್ತರಃ ಅರ್ಥವಾಯಿತು

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಉತ್ತರಃ ವಿಚಾರಣೆಯಾಗಬೇಕು

(ಈ ದೋಷರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ/ಗಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿ/ಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **11.08.2023**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.